ವಿಶಾಖ ಎನ್.

# ಹೊಸತೇ ಸೂತ್ರದಲ್ಲಿ ಹೆಣೆದ ಹೂರೂಪಕ

**ಪಾರಿಜಾತದ ಆಯುಸ್ಸು ಕಡಿಮೆ. ಈ ಸಿನಿಮಾ ನಾಯಕಿಯ ಬದುಕೂ ಹಾಗೆಯೇ. ಆ ಹೂವಿನ ಪರಿಮಳ ಆಘ್ರಾಣಿಸುವ ಮಾನವೀಯ ಸೆಲೆಯ ನಾಯಕ ಜನಪ್ರಿಯ ಮಾದರಿಗಳಿಗೆ ಹೊರತಾದವನು. ನಿರ್ದೇಶಕ ಶೂಜಿತ್ ಸರ್ಕಾರ್ ರೂಪಕಗಳನ್ನಿಟ್ಟು, ಭಾವಕೋಶಕ್ಕೆ ಪಾತಾಳ ಗರಡಿಯನ್ನು ಇಳಿಬಿಟ್ಟಿರುವ ಸಿನಿಮಾ ಆಗಿ 'ಅಕ್ಟೋಬರ್' ತುಂಬ ಮುಖ್ಯವಾದುದು**

ಪ್ರೇಮಕಥೆಗಳ ಕೆಲವು ಮಾದರಿಗಳನ್ನು ಸಿನಿಮಾ ನಮಗೆ ಕೊಟ್ಟಿದೆ. ಮನೆಯವರನ್ನು ಧಿಕ್ಕರಿಸಿ ಪ್ರೇಮ ಸಾಕ್ಷಾತ್ಕಾರ ಮಾಡಿಕೊಳ್ಳುವುದು ಒಂದು ಬಗೆ. ಓಡಿಹೋಗಿ, ಬದುಕು ಕಟ್ಟಿಕೊಳ್ಳಲು ಹೆಣಗಾಡಿ, ಕ್ರೌರ್ಯದ ಕೂರಂಬುಗಳಿಗೆ ಎದೆಗೊಟ್ಟು ಪ್ರಾಣ ಬಿಡುವುದು ಇನ್ನೊಂದು ಬಗೆ. ಮರಣಶಯ್ಯೆ ಮೇಲೆ ಮಲಗಿರುವವರನ್ನೇ ಕೇಂದ್ರೀಕರಿಸಿದ ಪ್ರೇಮಕಥೆಗಳದ್ದು ಮಗದೊಂದು ಸ್ವರೂಪ. ಬಾಲಿವುಡ್ ಅಂತೂ ಕೆಲವು ನಿರ್ದಿಷ್ಟ ಮಾದರಿಗಳಿಂದ ಕಳಚಿಕೊಳ್ಳಲಾರದಷ್ಟು ಮಾರುಕಟ್ಟೆ ಪ್ರಣೀತವಾಗಿಬಿಟ್ಟಿದೆ. ಅದನ್ನು ಪ್ರಶ್ನಿಸುವಂತೆ ದಿಟ್ಟತನದಿಂದ ನಿರ್ದೇಶಕ ಶೂಜಿತ್ ಸರ್ಕಾರ್ ಹೊಸತೇ ಪ್ರೇಮಕಥೆಯನ್ನು ತೇಲಿಬಿಟ್ಟಿದ್ದಾರೆ; ಕಟ್ಟಿದ್ದಾರೆ ಎಂದರೆ ಅದೂ ಒಂದು ಮಿತಿಯೇ ಆಗಿಬಿಡುತ್ತದೆ.

ಕೆಲವು ಚದುರಿದ ದೃಶ್ಯಗಳನ್ನು ನೋಡೋಣ: